Government of Karnataka:

No: LD 170 FEMARA 2018 (P-5)

Ministry of Government of Karnataka,
Vikas Soudha, Bangalore, Date: 05.03.2020.

**Circular**

**Subject: - With regard to the Extension of 28 days of Additional leave with wages to Corona Virus affected employees**

There is an urgent need for the Department of Labour to take an immediate action to prevent the spread of the Corona Virus in the State of Karnataka. Therefore, all the concerned authorities are required to take the following measures:

1. Coronavirus infected workers are required to be extended with 28 days of leave with full wages. And the workers of the organizations who are covered under ESI Act, can visit the nearest ESI dispensary / hospital to obtain a medical certificate from the doctors in the hospital.

2. All ESI Medical officers must urgently inspect and issue a certificate to the workers those who are coming to receive the certificate of illness.

3. On submission of certificate as received from the ESI to the Management, immediately 28 days of leave must be sanctioned to such workers.

4. Employees those who are working but not-covered under the ESI, in case if they are affected with Corona Virus, then they must be granted with 28 days' of paid sick leave along with other leaves in accordance with Section 15 (3) of the Karnataka Shops and Commercial Establishment.

   C.R.P.C Act, Section 144, as discretionary power of District collector and District Magistrate officer to take all necessary actions in the event of an emergency, so as to ensure that the affected corona virus is isolated from contact with other people.

S/d
(Sandhya L Naik)
Deputy Secretary of Govt.
Labour dept

ಕರ್ನಾಟಕ ಸರ್ಕಾರ
GOVERNMENT OF KARNATAKA
ಕಾರ್ಮಿಕರರಾಜ್ಯ ವಿಮಾಯೋಜನೆ ವೈದ್ಯಕೀಯ ಸೇವೆಗಳ ನಿರ್ದೇಶನಾಲಯ
DIRECTORATE OF E.S.I.S MEDICAL SERVICES
ಎಸ್.ನಿಜಲಿಂಗಪ್ಪರಸ್ತೆ, ರಾಜಾಜಿನಗರ 2ನೇ ಬ್ಲಾಕ್, ಬೆಂಗಳೂರು– 560010
S.NIJALINGAPPA ROAD, RAJAJINAGAR 2ND BLOCK, BANGALORE-560 010.
www.karnataka.gov.in/esisms Telefax: (080)23324216 /23328105

No: ಆಪ್ತಶಾಖೆ/02/2019-20 Dated: 05-03-2020

**"UTMOST URGENT"**

## ಹಿಂಬರಹ

ವಿಷಯ: ಕರೋನ ವೈರಸ್ ಬಾಧಿತ ವಿಮಾದಾರರಿಗೆ 28 ದಿನಗಳ ವೇತನ ಸಹಿತ ರಜೆ ಯನ್ನು ನೀಡುವ ಕುರಿತು.

ಉಲ್ಲೇಖ: ಸರ್ಕಾರದ ಪತ್ರ ಸಂಖ್ಯೆ: ಕಾಇ 170 ಸ್ವೀಮರ 2018 (ಭಾ–5) ದಿನಾಂಕ: 05–03–2020

-------

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಸರ್ಕಾರದ ಸುತ್ತೋಲೆ ಪತ್ರವನ್ನು ಈ ಪತ್ರದೊಂದಿಗೆ ಲಗತ್ತಿಸುತ್ತಾ, ಅದರಂತೆ ಮುಂದಿನ ಕ್ರಮ ಕೈಗೊಳ್ಳಲು ಎಲ್ಲಾ ವೈದ್ಯಕೀಯ ಅಧೀಕ್ಷಕರು / ಆಡಳಿತ ವಿಮಾ ವೈದ್ಯಾಧಿಕಾರಿಗಳಿಗೆ ಸೂಚಿಸಿದೆ.

05/03/2020

ನಿರ್ದೇಶಕರು,
ಕಾರಾವಿ ಯೋ ವೈ ಸೇವೆಗಳು.

5/3/20

ಗೆ,

(1) ವೈದ್ಯಕೀಯ ಅಧೀಕ್ಷಕರು– ಕಾರಾವಿ ಆಸ್ಪತ್ರೆ ಇಂದಿರಾನಗರ, ಬೆಂಗಳೂರು, ಮೈಸೂರು, ಮಂಗಳೂರು, ದಾವಣಗೆರೆ , ಹುಬ್ಬಳ್ಳಿ, ಬೆಳಗಾವಿ, ದಾಂಡೇಲಿ, ರೋಗ ಪತ್ತೆ ಹಚ್ಚುವ ಕೇಂದ್ರ,ಬಸವನಗುಡಿ, ಬೆಂಗಳೂರು ಇವರಿಗೆ ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.

(2) ಎಲ್ಲಾ ಆಡಳಿತ ವಿಮಾ ವೈದ್ಯಾಧೀಕಾರಿಗಳು, ಕಾರಾವಿ ಚಿಕಿತ್ಸಾಲಯ| ---------- ಇವರಿಗೆ ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.

(3) ಕಛೇರಿ ಪ್ರತಿ.

ಕರ್ನಾಟಕ ಸರ್ಕಾರ

ಸಂಖ್ಯೆ: ಕಾಇ 170 ಸ್ವೀಮರ 2018(ಭಾ-5)

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ:05.03.2020.

## ಸುತ್ತೋಲೆ

ವಿಷಯ:- ಕರೋನಾ ವೈರಸ್ ಬಾಧಿತ ಕಾರ್ಮಿಕರಿಗೆ 28 ದಿನಗಳ ವೇತನಸಹಿತ ರಜೆಯನ್ನು ನೀಡುವ ಕುರಿತು.

*****

ಕರ್ನಾಟಕ ರಾಜ್ಯದಲ್ಲಿ ಕರೋನಾ ವೈರಸ್ ಹರಡುವುದನ್ನು ತಡೆಗಟ್ಟುವ ನಿಟ್ಟಿನಲ್ಲಿ ಕಾರ್ಮಿಕ ಇಲಾಖೆಯು ಸೂಕ್ತ ಕ್ರಮವಹಿಸುವ ತುರ್ತು ಅಗತ್ಯತೆ ಇದೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಈ ಕೆಳಕಂಡಂತೆ ಕ್ರಮವಹಿಸುವುದು.

1. ಕರೋನಾ ವೈರಸ್ ಬಾಧಿತ ಕಾರ್ಮಿಕರಿಗೆ 28 ದಿನಗಳ ರಜೆಯ ಅಗತ್ಯವಿರುವುದರಿಂದ ಇ.ಎಸ್.ಐ ಕಾಯ್ದೆ ಅನ್ವಯವಾಗುವ ಸಂಸ್ಥೆಗಳ ಕಾರ್ಮಿಕರು ತಮ್ಮ ಹತ್ತಿರದ ಇ.ಎಸ್.ಐ. ಔಷಧಾಲಯ / ಆಸ್ಪತ್ರೆಗಳಿಗೆ ತೆರಳ ಸದರಿ ಆಸ್ಪತ್ರೆಗಳಲ್ಲಿನ ವೈದ್ಯಾಧಿಕಾರಿಗಳಿಂದ ಪ್ರಮಾಣ ಪತ್ರವನ್ನು ಪಡೆಯತಕ್ಕದ್ದು.
2. ಈ ರೀತಿ ಪ್ರಮಾಣ ಪತ್ರ ಪಡೆಯಲು ಬರುವ ಕಾರ್ಮಿಕರಿಗೆ ಎಲ್ಲಾ ಇ.ಎಸ್.ಐ ವೈದ್ಯಾಧಿಕಾರಿಗಳು ತುರ್ತಾಗಿ ಪರಿಶೀಲನೆ ನಡೆಸಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ನೀಡತಕ್ಕದ್ದು,
3. ಅಂತಹ ಕಾರ್ಮಿಕರು ಇ.ಎಸ್.ಐ ನಿಂದ ನೀಡಲ್ಪಟ್ಟ ಪ್ರಮಾಣ ಪತ್ರವನ್ನು ತಮ್ಮ ಸಂಸ್ಥೆಯ ಆಡಳಿತವರ್ಗಕ್ಕೆ ಸಲ್ಲಿಸಿದ ತಕ್ಷಣ 28 ದಿನಗಳ ರಜೆಯನ್ನು ಕಡ್ಡಾಯವಾಗಿ ಮಂಜೂರು ಮಾಡತಕ್ಕದ್ದು.
4. ಇ.ಎಸ್.ಐ. ಕಾಯ್ದೆ ಅನ್ವಯವಾಗದಿರುವ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ ನೌಕರರು ಕರೋನಾ ವೈರಸ್ ಬಾಧಿತರಾದಲ್ಲಿ ಅವರಿಗೆ ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಕಲಂ 15(3) ಅನ್ವಯ 28 ದಿನಗಳ ವೇತನಸಹಿತ ಅನಾರೋಗ್ಯದ ರಜೆ ಮತ್ತು ಇತರೆ ರಜೆಯನ್ನು ಕಡ್ಡಾಯವಾಗಿ ಮಂಜೂರು ಮಾಡತಕ್ಕದ್ದು.

ಸಿ.ಆರ್.ಪಿ.ಸಿ ಕಾಯ್ದೆಯ ಕಲಂ 144ರನ್ವಯ ಜಿಲ್ಲೆಯ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು ತುರ್ತು ಸಂದರ್ಭದಲ್ಲಿ ಅಗತ್ಯವಿರುವ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಲು ಅಧಿಕಾರವಿದ್ದು, ಅದರಂತೆ ಕರೋನಾ ವೈರಸ್ ಬಾಧಿತ ವ್ಯಕ್ತಿಗಳು ಇತರೆ ಜನರ ಸಂಪರ್ಕಕ್ಕೆ ಬಾರದಂತೆ ಪ್ರತ್ಯೇಕವಾಗಿರಿಸಲು ಸೂಕ್ತ ಕ್ರಮ ಕೈಗೊಳ್ಳತಕ್ಕದ್ದು.

(ಸಂಧ್ಯಾ ಎಲ್. ನಾಯಕ್)
ಸರ್ಕಾರದ ಉಪ ಕಾರ್ಯದರ್ಶಿ
ಕಾರ್ಮಿಕ ಇಲಾಖೆ

05/03/2020.

ಇವರಿಗೆ:

ನಿರ್ದೇಶಕರು, ಕರ್ನಾಟಕ ರಾಜ್ಯ ವಿಮಾ ವೈದ್ಯಕೀಯ ಸೇವೆಗಳು, ರಾಜಾಜಿನಗರ, ಬೆಂಗಳೂರು. (ಈ ಸುತ್ತೋಲೆಯನ್ನು ತಮ್ಮ ಅಧೀನದಲ್ಲಿ ಬರುವ ಎಲ್ಲಾ ವೈದ್ಯಾಧಿಕಾರಿಗಳ ಗಮನಕ್ಕೆ ತರುವುದು.)

**ಪ್ರತಿಯನ್ನು ಮಾಹಿತಿಗಾಗಿ:**

1. ಮಾನ್ಯ ಕಾರ್ಮಿಕ ಸಚಿವರ ಆಪ್ತ ಕಾರ್ಯದರ್ಶಿಗಳಿಗೆ ಮಾನ್ಯ ಸಚಿವರ ಅವಗಾಹನೆಗಾಗಿ ತರುವುದಕ್ಕಾಗಿ.
2. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ಕಾರ್ಮಿಕ ಇಲಾಖೆ ವಿಕಾಸ ಸೌಧ, ಬೆಂಗಳೂರು.
4. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.